# ಆಹಾ ಸುದ್ದಿ!





ಅಮೆರಿಕದಲ್ಲಿ ಈ ಚಿತ್ರ ಅಂತರ್ಜಾಲದಲ್ಲಿ ವೈರಲ್ ಆಗಿದೆಯಂತೆ. ನಗ್ನ ಪುರುಷನೊಬ್ಬ ಸತ್ತ ಶಾರ್ಕ್ ಅನ್ನು ಅಪ್ಪಿಕೊಂಡ ಈ ಚಿತ್ರ ನೋಡಿದ ಪ್ರಾಣಿಪ್ರಿಯರು ಶಾರ್ಕ್‌ಗೆ ಅಗೌರವ ತೋರಿಸಿದಂತೆ ಎಂದು ದೂರು ನೀಡಿದ್ದಾರಂತೆ. ಪಾಪ, ಶಾರ್ಕ್ ಬಟ್ಟೆ ತೊಟ್ಟಿಲ್ಲ ಎಂದು ಅದಕ್ಕೆ ಗೌರವ ತೋರಿಸಲು ಹೋಗಿದ್ದೇ ಈತನ ತಪ್ಪಾಗಿರಬಹುದು.



ಚೀನಾದ ಈ ಪ್ರವಾಸಿ ಮಾರ್ಗದರ್ಶಿಯ ಕೈಯಲ್ಲಿರುವ ಕಾರ್ಡ್ ಪ್ರಚಾರಕ್ಕಲ್ಲ. ಕೈಗಳು ದೇಹಕ್ಕೆ ತಾಗಿಯೂ ತಾಗದಂತಿರಬೇಕು ಎಂದು ಅಲ್ಲಿ ತರಬೇತಿ ಕೊಡುತ್ತಾರಂತೆ. ಪ್ರವಾಸಿಗರ ಪ್ರವಾಸಿ ತಾಣದಮೇಲಿನ ಲಕ್ಷ್ಯವನ್ನು ಈ ರೀತಿ ಬೇರೆ ಕಡೆ ಸೆಳೆಯಬಾರದಿತ್ತು.



ಈತ ಜಗತ್ತಿನ ಏಕೈಕ ಮತ್ಸ್ಯಪುರುಷ ಬ್ರೆಜಿಲ್‌ನ ಒಲವ್ಯೆರ ಮೊರ್ಯೆರ. ಇದುವರೆಗೆ ಮತ್ಸ್ಯಕನ್ಯೆಯ ದಿರಿಸು ತೊಟ್ಟು ಮೆರೆಯುತ್ತಿದ್ದ ಹೆಂಗಳೆಯರಿಗೆ ಸೆಡ್ಡು ಹೊಡೆದಿದ್ದಾನಂತೆ. ಹುಚ್ಚಿನಲ್ಲೂ ಸಮಾನತೆ ಸಾಧಿಸಲು ಹೊರಟಿದ್ದಾನೆ.

ಸ್ಕಾಟ್ಲೆಂಡ್‌ನಲ್ಲಿ ಕಲಾ ಪ್ರದರ್ಶನ ನೋಡಲು ಹೋದ ಬಾಲಕನೊಬ್ಬ ಅನಾನಸ್ ಹಣ್ಣನ್ನು ಅಲ್ಲೇ ಬಿಟ್ಟು ಬಂದನಂತೆ. ಅದನ್ನು ಎಲ್ಲಿಡಬೇಕೆಂದು ಗೊತ್ತಾಗದ ಆಯೋಜಕರು ಖಾಲಿ ಇದ್ದ ಗಾಜಿನ ಪೆಟ್ಟಿಗೆಯೊಳಗೆ ಇಟ್ಟರಂತೆ. ಬಂದ ಕಲಾ ರಸಿಕರೆಲ್ಲ ಅದನ್ನೂ ಒಂದು ಪ್ರದರ್ಶನಕ್ಕಿಟ್ಟ ವಸ್ತು ಎಂದು ನೋಡಿದ್ದೇ ನೋಡಿದ್ದು. ಪ್ರದರ್ಶಕರು ದೊಡ್ಡ ಜೋಕ್ ಎಂದು ನಕ್ಕಿದ್ದೇ ನಕ್ಕಿದ್ದು. ಪ್ರದರ್ಶನ ಮುಗಿಯುವ ಮೊದಲೇ ಕೊಳೆತ ಹಣ್ಣನ್ನು ನೋಡಿ ನಗುವ ಸರದಿ ಯಾರದ್ದೋ!

ಹಣ, ಮೃದು ಪಾನೀಯ, ಕಾಂಡೋಮ್‌ಗಳಿಗೆಲ್ಲ ವೆಂಡಿಂಗ್ ಮಷಿನ್‌ಗಳು ಬಂದಾಯ್ತು. ಈಗ ಕಾರಿನ ಸರದಿ. ಸಿಂಗಪುರದಲ್ಲಿ ಲಕ್ಸುರಿ ಕಾರುಗಳ ಮಾರಾಟ ಮಳಿಗೆಯೊಂದು 15 ಅಂತಸ್ತುಗಳ ಕಾರ್ ವೆಂಡಿಂಗ್ ಮಷಿನ್ ನಿರ್ಮಿಸಿದೆ. ನೆಲ ಅಂತಸ್ತಿನಲ್ಲಿ ಗ್ರಾಹಕರು ಆಯ್ಕೆ ಮಾಡಿದ ಕಾರು ಎರಡೇ ನಿಮಿಷಗಳಲ್ಲಿ ಅವರ ಕಣ್ಮುಂದೆ ಬಂದು ನಿಲ್ಲುತ್ತದಂತೆ. ಇದಕ್ಕೆಲ್ಲ ರಿಯಲ್ ಎಸ್ಟೇಟ್ ದರ ಕಾರಣವಂತೆ. ಗಂಡು– ಹೆಣ್ಣಿನ ಆಯ್ಕೆಗೂ ವೆಂಡಿಂಗ್ ಮಷಿನ್ ತಯಾರಾಗುತ್ತಿರಬಹುದು.



ಅಮೆರಿಕಾದ ಮೇಗಾನ್ ಎಂಬ ಯುವತಿ ತನ್ನ ಕಾಲೇಜಿನ ಕೊನೆಯ ದಿನ ಸಮಾಧಿ ಪೆಟ್ಟಿಗೆಯಲ್ಲಿ ಮಲಗಿ ಆಗಮಿಸಿದಳಂತೆ. ಈಕೆಗೇನು ಬದುಕೇ ಬೇಡವಾಗಿದೆಯೇ ಎಂದು ಸಹಪಾಠಿಗಳು ನೊಂದುಕೊಂಡರೆ ಆಕೆಯ ತಾಯಿ ಸ್ಪಷ್ಟನೆ ನೀಡಿದಳಂತೆ, ತನ್ನ ಮಗಳು ಮುಂದೆ ಅಂತ್ಯಸಂಸ್ಕಾರ ಪ್ರಕ್ರಿಯೆಯ ನಿರ್ದೇಶಕಿಯಾಗುತ್ತಾಳೆ ಎಂದು.